ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Issue-3, November-December 2025, Pp. 30-39**
**©*IIMRD*, Mysuru**
IIMRD JOURNALS
**www.iimrd.com**

# ಕನ್ನಡಾನುವಾದಿತ ಮಲಯಾಳಂ ಕಾದಂಬರಿಗಳಲ್ಲಿ ಕೇರಳದ ಜಾತಿ ಸಂಪ್ರದಾಯದ ಸ್ವರೂಪ

**ಶಂಕ್ರಮ್ಮ ಸಿ**
ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಸಾರಾಂಶ: (Abstract)**

*ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯು ಭಾರತದಲ್ಲಿ ಜಮೀನ್ದಾರರ ಕೈಯಲ್ಲಿ ಸಿಲುಕಿ ನಲುಗುತ್ತಿತ್ತು. ದಕ್ಷಿಣ ಭಾರತದ ಕೇರಳದಲ್ಲಿ ಜನರನ್ನು ಪ್ರಾಣಿಗಳಿಗಿಂತ ತುಂಬಾ ಕೀಳಾಗಿ ನಡೆಸಿಕೊಂಡಿರುವಂತಹ ಕೆಟ್ಟ ಸಂಪ್ರದಾಯಗಳು ರೂಢಿಯಲ್ಲಿದ್ದವು. ಜಾತಿ ವ್ಯವಸ್ಥೆಯಲ್ಲಿ ಮೇಲ್ವರ್ಗದ ಜಮೀನ್ದಾರರು ಕೆಳವರ್ಗದ ಜಾತಿಯವರ ಮೇಲೆ ಕಟ್ಟುನಿಟ್ಟಿನ ನೀತಿ–ನಿಯಮ ನಿಷೇಧಗಳನ್ನು ಹಾಕುವ ಮೂಲಕ ಅವರನ್ನು ತುಂಬಾ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದ್ದರು. ಇಂತಹ ಸಾಮಾಜಿಕ ವ್ಯವಸ್ಥೆಯು ಶತಮಾನಗಳ ಕಾಲ ಕೇರಳದಲ್ಲಿ ನೆಲೆ ನಿಂತಿದ್ದವು. ಉತ್ತರದಿಂದ ಆರ್ಯರು ಆಗಮಿಸಿದ ನಂತರ ಕೇರಳದಲ್ಲಿ ಜಾತಿವ್ಯವಸ್ಥೆ ಆರಂಭವಾಯಿತು. ಕನ್ನಡ ಮತ್ತು ಮಲಯಾಳಂ ಎರಡೂ ಭಾಷೆಗಳ ಸಾಹಿತ್ಯ ಸಂಬಂಧವು ಪ್ರಮುಖವಾಗಿ ಅನುವಾದದ ಮೂಲಕ ಆಯಿತು. ಪ್ರಸ್ತುತ ಲೇಖನದಲ್ಲಿ ಜಾತಿವ್ಯವಸ್ಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮಲಯಾಳಂನಿಂದ ಕನ್ನಡಕ್ಕೆ ಅನುವಾದ ಆಗಿರುವ ಕಾದಂಬರಿಗಳ ಮೂಲಕ ಕೇರಳದ ಜಾತಿ ಸಂಪ್ರದಾಯಗಳ ಸ್ವರೂಪವನ್ನು ಕಂಡುಕೊಳ್ಳಬಹುದು.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಅನುವಾದ ಸಾಹಿತ್ಯ, ಮಲಯಾಳಂ ಕಾದಂಬರಿ, ಹಗ್ಗ, ಚೌಕಟ್ಟಿನ ಮನೆ*

## ಪೀಠಿಕೆ

ಕೇರಳದ ಜಾತಿ ಪದ್ಧತಿಯ ಶ್ರೇಣೀಕರಣ ವ್ಯವಸ್ಥೆಯಲ್ಲಿ ನಂಬೂದಿರಿ ಬ್ರಾಹ್ಮಣರು ಸಮಾಜದ ಉನ್ನತ ಸ್ಥಾನದಲ್ಲಿದ್ದರು. ಅಂದರೆ ನಂಬೂದಿರಿ ಬ್ರಾಹ್ಮಣರು, ತುಳು ಬ್ರಾಹ್ಮಣರು, ಗೌಡ ಸಾರಸ್ವತರು, ಎಂಬ್ರಾಂದಿಗಳು, ನಾಯನ್ಮಾರರು, ಕ್ಷತ್ರಿಯರು ಇವರೆಲ್ಲರೂ ಕೇರಳದ ಜಾತಿ ವ್ಯವಸ್ಥೆಯಲ್ಲಿ ಹಿಂದೂ ಸಮುದಾಯದ ಪ್ರಧಾನ ಜಾತಿಯವರಾಗಿದ್ದರು. ಇನ್ನುಳಿದ ಇತರೆ ಜಾತಿಗಳಾದ ಕಮ್ಮಾಳರು, ಮುಕ್ಕುವರು (ಬೆಸ್ತ), ಪುಲಯರು, ಹೊಲೆಯರು, ಪರಯರು, ಮರಯರು, ಕುರವನ್, ಕಾಡರ್, ಬೆರುಮರ್, ನಾಯಾಡಿ ಮೊದಲಾದ ಜಾತಿಗಳವರು ಸಮಾಜದ ಕೆಳಸ್ತರದಲ್ಲಿ ಕಂಡುಬರುತ್ತಿದ್ದರು. ಎಲ್ಲಾ ರೀತಿಯಲ್ಲಿಯೂ ಶೋಷಣೆಗೆ ಗುರಿಯಾಗುತ್ತಿದ್ದ ಈ ಕೆಳಸಮುದಾಯದವರು ಅಸಹಾಯಕರಾಗಿ ಮೇಲ್ವರ್ಗದವರಿಗೆ

*Please cite this article as:* ಶಂಕ್ರಮ್ಮ, ಸಿ. (2025). ಕನ್ನಡಾನುವಾದಿತ ಮಲಯಾಳಂ ಕಾದಂಬರಿಗಳಲ್ಲಿ ಕೇರಳದ ಜಾತಿ ಸಂಪ್ರದಾಯದ ಸ್ವರೂಪ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ. 30–39*

ವಿಧೇಯವಾಗಿ ನಡೆದುಕೊಳ್ಳಬೇಕಾಗಿತ್ತು. ಮುಂದುವರಿದ ವರ್ಗಗಳಿಗೆ ಸಮಾಜದ ಎಲ್ಲಾ ರೀತಿಯ ಸೌಲಭ್ಯಗಳು ದೊರೆಯುತ್ತಿದ್ದು, ಹಿಂದುಳಿದ ವರ್ಗಗಳು ಮತ್ತು ಅಸ್ಪೃಶ್ಯರು ಅಂತಹ ಸೌಲಭ್ಯಗಳಿಂದ ವಂಚಿತರಾಗಿದ್ದು, ಅವರ ಸ್ಥಿತಿ ತುಂಬಾ ಶೋಚನೀಯವಾಗಿತ್ತು.

ಜಾತೀಯತೆಯೊಂದಿಗೆ (ಮೇಲ್ವರ್ಗ) ಜಮೀನ್ದಾರ ವರ್ಗ ಮತ್ತು ಕೈಯರ್ (ಕೆಳವರ್ಗ) ಕೂಲಿಕಾರ ವರ್ಗ ಎನ್ನುವ ಸಾಮಾಜಿಕ ವಿಂಗಡಣೆಯನ್ನು ಮಾಡಿಕೊಂಡಿದ್ದರು. ಹೀಗೆ ಉನ್ನತ ಜಾತಿಗೆ ಸೇರಿದವರು ಸಮಾಜದ ಉತ್ಕೃಷ್ಟ ನೆಲೆಯಲ್ಲಿ ಮತ್ತು ಕೆಳಜಾತಿಗೆ ಸೇರಿದವರು ಸಮಾಜದ ನಿಕೃಷ್ಟ ನೆಲೆಯಲ್ಲಿಯೇ ಉಳಿದುಕೊಂಡರು. ಅತ್ಯಂತ ನಿರ್ದಾಕ್ಷಿಣ್ಯವಾಗಿ ಅಸ್ಪೃಶ್ಯತೆಯನ್ನು ಕಾಪಾಡುತ್ತಿದ್ದರು. ಕೆಳಜಾತಿಯವರು ಮೇಲ್ವರ್ಗದವರ ಕಣ್ಣಿಗೂ ಕಾಣದಂತೆ ಬದುಕಬೇಕಾಗಿತ್ತು. ಕೆಲವು ಜಾತಿಗಳವರಿಗೆ ನಿರ್ದಿಷ್ಟ ಅಂತರದಿಂದ ವ್ಯವಹರಿಸಬೇಕಾದ ನಿರ್ಬಂಧಗಳಿದ್ದವು. ಅಂದರೆ ಪುಲಯರ್ ನಾಯನ್ಮಾರರಿಂದ ಅರವತ್ತು ಅಡಿ ದೂರದಲ್ಲಿ ನಿಲ್ಲಬೇಕಾಗಿತ್ತು. ಪುಲಯರನ್ನು, ಬೇಡರನ್ನು, ಕಣ್ಣಿನಲ್ಲಿ ನೋಡಿದರೆ ನಂಬೂದಿರಿ ಬ್ರಾಹ್ಮಣರಿಗೆ ಅಶುದ್ಧಿಯಾಗುತ್ತಿತ್ತು. ಮೇಲ್ವರ್ಗದವರು ದಾರಿಯಲ್ಲಿ ನಡೆದುಕೊಂಡು ಬರುತ್ತಿರುವಾಗ ಕೆಳಜಾತಿಯವರು ಅವರ ಕಣ್ಣಿಗೆ ಕಾಣಿಸಿಕೊಳ್ಳದಂತೆ ಅಡಗಿಸಿಕೊಳ್ಳಬೇಕಾಗಿತ್ತು. ಇಂತಹ ಸಂಪ್ರದಾಯಗಳನ್ನು ಪಾಲಿಸದ ಕೆಳಜಾತಿಯವರನ್ನು ಕೊಲೆ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಕೆಳವರ್ಗದವರಿಗೆ ನಿಷೇಧಿಸಲಾಗಿದ್ದ ಅನೇಕ ಅನುಕೂಲಗಳು ನಂಬೂದಿರಿ ಬ್ರಾಹ್ಮಣರು ಮತ್ತು ಕ್ಷತ್ರೀಯರಿಗೆ ದೊರೆಯುತ್ತಿದ್ದವು. ವಿವಾದದ ವಿಷಯಗಳು ಬಂದಾಗ ಅವುಗಳಿಗೆ ಪರಿಹಾರವನ್ನು ಸೂಚಿಸಿ ಅಂತಿಮವಾದ ತೀರ್ಪು ನೀಡುವವರು ವೈದಿಕ ಬ್ರಾಹ್ಮಣರಾಗಿದ್ದರು. ಅಂದರೆ ಅವರ ತೀರ್ಪನ್ನು ಪ್ರಶ್ನಿಸುವ ಹಕ್ಕು ಕೆಳಜಾತಿಯವರಿಗೆ ಇರಲಿಲ್ಲ. ಯಾವುದೇ ರೀತಿಯ ಘೋರ ಅಪರಾಧ ಮಾಡಿದರೂ ಸಹ ಬ್ರಾಹ್ಮಣರಿಗೆ ಶಿಕ್ಷೆ ಕೊಡುತ್ತಿರಲಿಲ್ಲ. ಕೆಳಜಾತಿಯವರು ಕಳ್ಳತನ, ಗೋಹತ್ಯೆಯಂತಹ ಅಪರಾಧ ಮಾಡಿದರೆ ಶಿಕ್ಷೆ ವಿಧಿಸುತ್ತಿದ್ದರು. ಕೆಳಜಾತಿಯವರು ಸಣ್ಣಪುಟ್ಟ ಅಪರಾಧಗಳನ್ನು ಮಾಡಿದರೂ ಸಹ ಆನೆಯಿಂದ ತುಳಿಸಿ ಸಾಯಿಸುವ ಮತ್ತು ಪಿರಂಗಿಯ ಬಾಯಿಗೆ ತಲೆಯನ್ನು ಕೊಟ್ಟು ಕೊಲ್ಲುತ್ತಿದ್ದರು. ಹೀಗೆ ಚಿತ್ರಹಿಂಸೆ ನೀಡಿ ಕೊಲ್ಲುವ ಘೋರ ಶಿಕ್ಷೆಗಳನ್ನು ವಿಧಿಸುತ್ತಿದ್ದರು ಹಾಗೂ ತಪ್ಪನ್ನು ಮಾಡಿದವರು ಈಳವ ಮತ್ತು ಪುಲಯರಾಗಿದ್ದರೆ ಅವರನ್ನು ಗಲ್ಲಿಗೇರಿಸಿ ಕೊಲ್ಲುತ್ತಿದ್ದರು. ನಾಯರರಾದರೆ ಶಿರಚ್ಛೇಧನ ಮಾಡುತ್ತಿದ್ದರು. ಈ ಎಲ್ಲಾ ಶಿಕ್ಷೆಗಳು ಒಂದೇ ಪ್ರಮಾಣದ ಅಪರಾಧಗಳಿಗೆ ಜಾತಿಯನ್ನು ಅನುಸರಿಸಿ ನೀಡುತ್ತಿದ್ದರು. ಅಪರಾಧ ಮಾಡಿದವರನ್ನು ಸತ್ಯಪರೀಕ್ಷೆಗೆ ಒಡ್ಡುವ ಸಂಪ್ರದಾಯವು ಸಹ ಜಾತಿಯ ಹಿನ್ನೆಲೆಯನ್ನು ನೋಡಿಯೇ ಮಾಡುತ್ತಿದ್ದರು. ಅಂದರೆ ಕ್ಷತ್ರಿಯರು ಅಗ್ನಿ ಸ್ಪರ್ಶ ಮಾಡಬೇಕಿತ್ತು ಹಾಗೂ ಶೂದ್ರರು ವಿಷಸೇವಿಸಿ ಸತ್ಯ ಪರೀಕ್ಷೆಗೆ ಗುರಿಯಾಗಬೇಕಿತ್ತು. ಆಚಾರಗಳಿಗೆ ತಪ್ಪಿ ನಡೆದ ನಂಬೂದಿರಿ ಸ್ತ್ರೀಯರನ್ನು ಶುಚೀಂದ್ರಂ ದೇವಾಲಯದಲ್ಲಿ ಕುದಿಯುವ ತುಪ್ಪದಲ್ಲಿ ಕೈಯನ್ನು ಇರಿಸಿ ಸತ್ಯಪರೀಕ್ಷೆಗೆ ಒಳಪಡಿಸುತ್ತಿದ್ದರು. ಜಾತಿಗಳ ನಡುವೆ ಇರುವ ಅಸಮಾನತೆಯ ಕಾರಣದಿಂದ ಹಿಂದೂ ಸಮುದಾಯದಲ್ಲಿ ಒಗ್ಗಟ್ಟಿರಲಿಲ್ಲ.

ಹಿಂದೂ ಸಮುದಾಯದವರಾದ ಎಲ್ಲಾ ಮೇಲ್ವರ್ಗದ ಜಾತಿಗಳವರು ಕೆಳವರ್ಗದವರ ಜೊತೆ ಅಂತರವನ್ನು ಕಾಪಾಡಿಕೊಂಡು ಬಂದರು. ಹಾಗೂ ಸಾರ್ವಜನಿಕ ಸ್ಥಳಗಳಾದ ದೇವಾಲಯ, ಶಾಲೆಗಳಿಗೆ

ಪ್ರವೇಶವನ್ನು ನಿಷೇಧ ಮಾಡಿದರು. ಸಾರ್ವಜನಿಕ ಪ್ರದೇಶಗಳಲ್ಲಿ ಭಯಮುಕ್ತರಾಗಿ ನಡೆದಾಡುವ ಅವಕಾಶವೂ ಇರಲಿಲ್ಲ. ಹೀಗೆ ಅಸ್ಪೃಶ್ಯ ಆಚರಣೆ ತುಂಬಾ ಕಠಿಣವಾಗಿತ್ತು. ಹೊಲೆಯರು, ಪರಯರು, ಚಮ್ಮಾರರು ಮೊದಲಾದ ಜಾತಿಗಳವರು ಕೃಷಿ ಕೆಲಸ ಮಾಡುವ ಮೂಲಕ ಮೇಲ್ವರ್ಗದವರಿಗೆ ವಿಧೇಯರಾಗಿ ಬದುಕಬೇಕಿತ್ತು. ಇವರನ್ನು ಮೇಲ್ವರ್ಗದವರು ಮಾರಾಟ ಮಾಡಬಹುದು, ಖರೀದಿಸಬಹುದು, ಒತ್ತೆಯಿಡಬಹುದು. ಇಷ್ಟೊಂದು ನಿಕೃಷ್ಟವಾದ ಜಾತಿವ್ಯವಸ್ಥೆ ಕೇರಳದಲ್ಲಿ ಪ್ರಾಬಲ್ಯದಲ್ಲಿತ್ತು ಹಾಗೂ ಮಲಗುವುದಕ್ಕೆ ಜಾಗ ಮತ್ತು ಬದುಕುವುದಕ್ಕೆ ಆಹಾರವನ್ನು ಕೊಟ್ಟು ಇಡೀ ಜೀವನ ಪೂರ್ತಿ ಈ ಮೇಲ್ವರ್ಗದವರು ಕೆಳವರ್ಗದವರನ್ನು ದುಡಿಸಿಕೊಳ್ಳುತ್ತಿದ್ದರು.

ಇಂತಹ ಎಲ್ಲಾ ರೀತಿಯ ಶೋಷಣೆಗೆ ಒಳಗಾಗಿದ್ದರಿಂದ ಕೆಳಜಾತಿಯವರು ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕಾದ ಕಪ್ಪು ಜನರನ್ನು ನಡೆಸಿಕೊಂಡಿದ್ದಕ್ಕಿಂತಲೂ ತುಂಬಾ ಕ್ರೂರವಾಗಿ ಇವರನ್ನು ನಡೆಸಿಕೊಳ್ಳುತ್ತಿದ್ದರು. ಈ ರೀತಿಯಾಗಿ ಕೇರಳದಲ್ಲಿ ಜಾತಿವ್ಯವಸ್ಥೆ ನೆಲೆನಿಂತಿತ್ತು. ಈ ಜಾತಿವ್ಯವಸ್ಥೆಗೆ ಮುಖ್ಯ ಕಾರಣ ಬ್ರಾಹ್ಮಣರಲ್ಲಿ ಕೇಂದ್ರೀಕೃತಗೊಂಡಿರುವ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯ. ಹತ್ತೊಂಬತ್ತನೆಯ ಶತಮಾನದವರೆಗೂ ಈ ಜಾತಿವ್ಯವಸ್ಥೆ ಕೇರಳದಲ್ಲಿ ಪ್ರಾಬಲ್ಯದಲ್ಲಿತ್ತು. ಕೇರಳಕ್ಕೆ ಬ್ರಿಟಿಷ್ ಅಧಿಕಾರಿಗಳು ಬಂದು ಅಲ್ಲಿನ ಜಾತೀಯತೆಯ ಶಿಕ್ಷಾ ವಿಧಾನದಲ್ಲಿ ಬದಲಾವಣೆಗಳನ್ನು ತರಲು ಬಯಸಿದರು. ಆದರೆ ಉನ್ನತ ಜಾತಿಯವರು ತಮ್ಮ ಸ್ಥಾನಮಾನ ಮತ್ತು ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ಪಾಶ್ಚಾತ್ಯ ಮಿಷನರಿಗಳು, ಶ್ರೀ ನಾರಾಯಣ ಗುರು ಮೊದಲಾದವರ ಸಮಾಜ ಸುಧಾರಣೆಯ ಫಲವಾಗಿ ಈ ಜಾತಿ ವ್ಯವಸ್ಥೆಯು ಶಿಥಿಲಗೊಂಡಿತು. 1956 ನವೆಂಬರ್ 12 ರಂದು ತಿರುವಾಂಕೂರು ಮಹಾರಾಜರಾದ ಶ್ರೀ ಚಿತ್ತಿರತಿರುನಾಳ್ ಬಾಲರಾಮವರ್ಮ ಅವರು ದೇವಾಲಯ ಪ್ರವೇಶ ಘೋಷಣೆಯನ್ನು ಹೊರಡಿಸುವುದರ ಮೂಲಕ ಜಾತಿವ್ಯವಸ್ಥೆಯನ್ನು ಕೇರಳದಲ್ಲಿ ಇಲ್ಲದಂತೆ ಮಾಡಿದರು. ಆದರೆ ಈಗಲೂ ಸಹ ಅಲ್ಲಿನ ಜಾತಿವ್ಯವಸ್ಥೆಯಲ್ಲಿರುವ ಅಸ್ಪೃಶ್ಯತೆಯು ಸಂಪೂರ್ಣವಾಗಿ ಬಿಟ್ಟು ಹೋಗಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಅಂತಹ ವ್ಯವಸ್ಥೆ ಕಣ್ಮರೆಯಾಗಿರಬಹುದು. ಆದರೆ ವ್ಯಕ್ತಿಗಳ ಖಾಸಗಿ ಬದುಕಿನಲ್ಲಿ ಈ ರೀತಿಯ ಜಾತಿ ಸಂಪ್ರದಾಯಗಳು ಇಂದಿಗೂ ಕೆಲವು ಕಡೆ ಆಚರಣೆಯಲ್ಲಿವೆ. ಇಂತಹ ಜಾತಿವ್ಯವಸ್ಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮಲಯಾಳಂನಿಂದ ಕನ್ನಡಕ್ಕೆ ಅನುವಾದ ಆಗಿರುವ ಕಾದಂಬರಿಗಳ ಮೂಲಕ ಕೇರಳದ ಜಾತಿ ಸಂಪ್ರದಾಯಗಳ ಸ್ವರೂಪವನ್ನು ಕಂಡುಕೊಳ್ಳಬಹುದು.

ತಕಳಿ ಶಿವಶಂಕರ ಪಿಳ್ಳೆ ಅವರು ಮಲಯಾಳಂನಲ್ಲಿ ಬರೆದಿರುವ **'ಕಯರ್'** ಕಾದಂಬರಿಯನ್ನು ಕನ್ನಡಕ್ಕೆ ನಾಯರ್, ಕೆ.ಕೆ., ಅಶೋಕ್ ಕುಮಾರ್ ಅವರು **'ಹಗ್ಗ'** ಎನ್ನುವ ಶೀರ್ಷಿಕೆಯ ಮೂಲಕ ಅನುವಾದ ಮಾಡಿದ್ದಾರೆ. ಹಾಗೂ ಎಂ.ಟಿ. ವಾಸುದೇವನ್ ನಾಯರ್ ಅವರು ಮಲಯಾಳಂನಲ್ಲಿ ಬರೆದಿರುವ **'ನಾಲುಕೆಟ್ಟು'** ಎಂಬ ಕಾದಂಬರಿಯನ್ನು ತಿಮ್ಮಪ್ಪ ಬಿ.ಕೆ. ಅವರು **'ಚೌಕಟ್ಟಿನ ಮನೆ'** ಎನ್ನುವ ಶೀರ್ಷಿಕೆಯ ಮೂಲಕ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈ ಎರಡು ಕಾದಂಬರಿಗಳಲ್ಲಿ ಕಂಡುಬರುವ ಕೇರಳದ ಜಾತಿ ಸಂಪ್ರದಾಯಗಳ ಸ್ವರೂಪವನ್ನು ಕುರಿತು ಈ ಕೆಳಗಿನಂತೆ ವಿಶ್ಲೇಷಣೆ ಮಾಡಲಾಗಿದೆ.

'ಹಗ್ಗ' ಕಾದಂಬರಿಯಲ್ಲಿ ನಿರೂಪಿತವಾಗಿರುವಂತೆ ಪಳ್ಳಿಚ್ಚಾನ್ ಕೆಳಜಾತಿಯ ಹೆಣ್ಣನ್ನು ಮೇಲ್ವರ್ಗದ ಸ್ವರೂಪ ಜಾತಿಯ ಗಂಡು ಮದುವೆ ಆಗಬಹುದು. ಆದರೆ ಪಳ್ಳಿಚ್ಚಾನ್ ಗಂಡು ಸ್ವರೂಪ ಜಾತಿಯ ಹೆಣ್ಣನ್ನು ಮದುವೆ ಮಾಡಿಕೊಳ್ಳುವ ಸಂಪ್ರದಾಯವಿರಲಿಲ್ಲ. ಅಂತಹ ಸಂಪ್ರದಾಯವನ್ನು ಮೀರಿ ಮದುವೆ ಮಾಡಿಕೊಂಡರೆ ಸ್ವರೂಪ ಜಾತಿಯ ಹೆಣ್ಣು ಜಾತಿ ಭ್ರಷ್ಟಳಾಗುತ್ತಾಳೆ ಹಾಗೂ ಪಳ್ಳಿಚ್ಚಾನ್ ಅವರು ಮುಟ್ಟಿದ್ದನ್ನು ಮೇಲ್ವರ್ಗದ ಸ್ವರೂಪ ಜಾತಿಯವರು ಊಟ ಮಾಡುತ್ತಿರಲಿಲ್ಲ. ಈ ರೀತಿಯ ವ್ಯವಸ್ಥೆಯು ತಲೆತಲಾಂತರಗಳಿಂದ ನಡೆದು ಬಂದಿರುವ ಪದ್ಧತಿಯಾಗಿತ್ತು. ಆದರೆ ಪಳ್ಳಿಚ್ಚಾನ್ ಜಾತಿಯ ಇಟ್ಟುಣ್ಣಾನ್‌ನು ಸ್ವರೂಪ ಜಾತಿಯವಳಾದ ಅರಕಾಡು ತರವಾಡಿನ ಕಿಟ್ಟುಶ್ಯಾರ್‌ನ ಮಗಳು ನಾಣಿಯನ್ನು ಮದುವೆ ಮಾಡಿಕೊಂಡನು. ಅವರಿಗೆ ಹುಟ್ಟಿದ ಮಗುವು ತಾಯಿಯ ಜಾತಿಗೆ ಸೇರಿ ಅದು ತಾಯಿಯ ಮನೆಯಲ್ಲಿಯೆ ಬೆಳೆಯಬೇಕೆಂಬ ಸಂಪ್ರದಾಯವಿತ್ತು. ಇಟ್ಟುಣ್ಣಾನ್‌ನ್ನು ಅವಳ ಮಕ್ಕಳು ಅಪ್ಪ ಎಂದು ಕರೆಯುವಂತಿರಲಿಲ್ಲ. ಆದರೆ ನಾಣಿಯು ಕೆಳಜಾತಿಯವನನ್ನು ಮದುವೆಯಾಗಿ ತನ್ನ ಜಾತಿಯ ಎಲ್ಲಾ ಸಂಪ್ರದಾಯ ಪದ್ಧತಿಯನ್ನು ಮೀರಿದ್ದರಿಂದ ಅವಳನ್ನು ಜಾತಿಭ್ರಷ್ಟಳನ್ನಾಗಿಸಿ ಬಹಿಷ್ಕಾರ ಹಾಕಿ ತರವಾಡಿನಿಂದ ಹೊರಹಾಕುತ್ತಾರೆ. ಆದ್ದರಿಂದ ಅವಳು ಮತ್ತು ಮಕ್ಕಳು ಗಂಡನ ಮನೆಯಲ್ಲಿಯೇ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಹೀಗೆ ಮೇಲ್ಜಾತಿಯ ಹುಡುಗಿಯನ್ನು ಕೆಳಜಾತಿಯ ಹುಡುಗ ಮದುವೆ ಮಾಡಿಕೊಳ್ಳುವ ಸಂಪ್ರದಾಯವಿರಲಿಲ್ಲ.

ಚೀರಟ್ಟ ನಾಯರ್ ತರವಾಡಿನವರು ಕೆಳಜಾತಿಯಾದ ಆಟಿತರ ಮನೆಯಲ್ಲಿ ಅವರು ಮುಟ್ಟಿದ ಊಟ ಮಾಡಬಾರದು ಮತ್ತು ನೀರನ್ನು ಸಹ ಕುಡಿಯಬಾರದೆಂದು ನಿಷೇಧವನ್ನು ಮಾಡಿದ್ದರು. ಆದ್ದರಿಂದ ಆ ತರವಾಡಿನ ಗಂಡು ಮತ್ತು ಹೆಣ್ಣುಮಕ್ಕಳೆಲ್ಲರೂ ಊಟ ಮತ್ತು ನೀರನ್ನು ಕುಡಿಯುತ್ತಿರಲಿಲ್ಲ. ಆದರೆ ಕಿಟ್ಟುಣ್ಣಿ ಕೈಮಳ್‌ನು ತರವಾಡಿನ ವಾರಸುದಾರನಾಗಿದ್ದು ಅವನು ಆಟಿತರ ಮನೆಯ ಹೆಣ್ಣನ್ನು ಮದುವೆ ಮಾಡಿಕೊಂಡು ಅಲ್ಲಿ ಊಟ ಮಾಡುತ್ತಾನೆ. ಆದ್ದರಿಂದ ಅವನನ್ನು ಜಾತಿಭ್ರಷ್ಟನನ್ನಾಗಿ ಮಾಡಿ ತರವಾಡಿನಿಂದ ಹೊರಗೆ ಹಾಕುತ್ತಾರೆ.

ಶೀಲಾಂತಿಪಿಳ್ಳೆ ಅವರು ನಾಯರ್ ಜಾತಿಯವರಿಗೆ ಸೇರಿದ್ದು, ಅವರು ನಾಯರ್‌ಗಳಲ್ಲಿಯೇ ತೀರ ಕೆಳಜಾತಿಯವರಾಗಿದ್ದರು. ಆದ್ದರಿಂದ ಇವರ ಮನೆತನಕ್ಕೆ ಮೇಲ್ವರ್ಗದ ಜಾತಿಯವರು ಹೆಣ್ಣನ್ನು ಮದುವೆ ಮಾಡಿಕೊಡುವ ಸಂಪ್ರದಾಯವಿಲ್ಲ. ಆದರೆ ಶೀಲಾಂತಿಪಿಳ್ಳೆಯ ಕಲ್ಯಾಣಿಯಮ್ಮನ ಮಗ ಕೇಶವನಿಗೆ ಮೇಲ್ವರ್ಗದ ಕಡುಕಾತ್ರ ತರವಾಡಿನ ಮಾತಳ ಮಗಳು ಕೊಚ್ಚುತೇವಿಯನ್ನು ಮದುವೆ ಮಾಡಿಕೊಳ್ಳಲು ಕೇಳುತ್ತಾಳೆ. ಆದರೆ ಹಿಂದಿನ ಕಾಲದಿಂದಲೂ ಶೀಲಾಂತಿಪಿಳ್ಳೆ ಮತ್ತು ಕಡುಕಾತ್ರ ಈ ಎರಡು ಕುಟುಂಬದವರ ನಡುವೆ ಯಾವುದೇ ಮದುವೆ ಮತ್ತು ನೆಂಟಸ್ತಿಕೆ ಕೊಡುಕೊಳ್ಳುವಿಕೆ ನಡೆದಿರುವುದಿಲ್ಲ. ಹಾಗೂ ಹೆಣ್ಣಿನ ಮನೆಯವರು ಗಂಡಿನ ಮನೆಗೆ ನೆಂಟಸ್ತಿಕೆಯ ಸಂಬಂಧ ಮಾಡಲು ಹೋಗಬಹುದು. ಆದರೆ ಗಂಡಿನ ತಾಯಿ ಕಲ್ಯಾಣಿಯಮ್ಮ ಹೆಣ್ಣಿನ ಮನೆಗೆ ಹೆಣ್ಣು ಕೇಳಲು ಹೋಗಿದ್ದು ಒಂದು ತಪ್ಪು ಅಪರಾಧವಾಗಿತ್ತು. ಆದ್ದರಿಂದ ಗಂಡಿನ ಬೆಲೆ ಕಡಿಮೆಯಾಗಿ ಹೆಣ್ಣಿನ ಬೆಲೆಯು ಹೆಚ್ಚಾಯಿತು ಹಾಗೂ ಕಲ್ಯಾಣಿಯಮ್ಮ ಸೂಲಗಿತ್ತಿಯಾಗಿದ್ದು ಊರಿನ ಮಹಿಳೆಯರ ಹೆರಿಗೆ ಮಾಡಿಸುತ್ತಿದ್ದಳು. ಆದರೆ ಅವಳು ತಮ್ಮ ನಾಯರ್ ಜಾತಿಗಿಂತ ಕೆಳಜಾತಿಯವರ ಮನೆಗೆ ಹೋಗಿ ಹೆರಿಗೆ ಮಾಡಿಸುವ ನಿಯಮವಿರಲಿಲ್ಲ. ಆದರೆ ಒಂದು ದಿನ

ರಾತ್ರಿ ಊರಿನ ಪುರಕಳದಲ್ಲಿ ಮುಸ್ಲಿಂ ಮಹಿಳೆಗೆ ಹೆರಿಗೆ ನೋವು ಬಂದಿರುತ್ತದೆ. ಆದ್ದರಿಂದ ಕಲ್ಯಾಣಿಯಮ್ಮ ತನ್ನ ಕುಟುಂಬದವರ ವಿರೋಧವನ್ನು ಕಟ್ಟಿಕೊಂಡು ಬೇಣದ ಕಾಡು ಮತ್ತು ಎರಮತ್ರ ಮಠದ ಬನಗಳಲ್ಲಿರುವ ಮದ್ದಿನ ಸೊಪ್ಪು, ಬಳ್ಳಿ, ಹುಲ್ಲುಗಳನ್ನು ತೆಗೆದುಕೊಂಡು ಹೋಗಿ ಬಸುರಿಯ ಬಾಯಿಗೆ ಹಸಿರು ಎಲೆಯ ರಸವನ್ನು ಹಿಂಡಿ ಲೇಪಿಸಿ ನಾಲಿಗೆಗೆ ರಸವನ್ನು ಬಿಟ್ಟು ಹೆರಿಗೆ ಮಾಡಿಸಿದಳು. ಹುಟ್ಟಿದ ಮಗುವನ್ನು ಕೀಳಾಗಿ ನೋಡದೆ ಮುದ್ದಾಡಿ ಬಂದಿದ್ದಳು. ಆದ್ದರಿಂದ ತನ್ನ ಜಾತಿಯ ಸಂಪ್ರದಾಯವನ್ನು ಮೀರಿ ಹೋಗಿದ್ದರಿಂದ ಮನೆಗೆ ಮರಳಿ ಬರುವಾಗ ತಲೆಗೆ ಸಗಣಿ ನೀರನ್ನು ಚಿಮುಕಿಸಿಕೊಂಡು ಕೊಳದಲ್ಲಿ ಮುಳುಗಿ ಬಂದಿದ್ದಳು. ಆದರೆ ಮನೆಯಲ್ಲಿ ಅಮ್ಮ ಮತ್ತು ತಂಗಿ ಅವಳನ್ನು ಅಡಿಗೆ ಕೋಣೆಗೂ ಸಹ ಬಿಟ್ಟುಕೊಳ್ಳದೆ ಮನೆಯ ಹೊರಗೆ ಇರುವ ಕುಟ್ಟಣದ ಮನೆಗೆ ಬಿಟ್ಟಿದ್ದರು. ಆದ್ದರಿಂದ ಊರಿನವರು ಕಲ್ಯಾಣಿಯಮ್ಮನನ್ನು ಜಾತಿಭ್ರಷ್ಟಳನ್ನಾಗಿ ಮಾಡಿ ಸಮಾಜದಿಂದ ಹೊರಗೆ ಹಾಕಿದ್ದರು. ಹೀಗೆ ಅವಳು ಕೆಳಜಾತಿಯವರಾದ ಚೋವ ಮತ್ತು ಪರೆಯ ಹೊಲತಿಯರ ಹೆರಿಗೆ ಮಾಡಿಸಲು ಜಾತಿ–ಮತಗಳನ್ನು ಪರಿಗಣಿಸದೆ ಹೋಗುತ್ತಿದ್ದಳು. ಅಂದರೆ ಅವಳು ಜಾತಿಭೇದ ಮಾಡುತ್ತಿರಲಿಲ್ಲ.

ಎಳ್ಳಾಂಪಿಳ್ಳಿ ತರವಾಡಿನ ಈಚರಪಿಳ್ಳೆಯು ಅತ್ತಿಪ್ರ ತರವಾಡಿನ ಪರಮು ಆಶಾನ್ ಮತ್ತು ಇಟ್ಟೂಲಿಯಮ್ಮರ ಮಗಳಾದ ಕಾಳಿಯನ್ನು ಮದುವೆ ಮಾಡಿಕೊಂಡನು. ಅವಳನ್ನು ಎಲ್ಲರೂ ಉಣ್ಣಾಚಿ ಎಂದು ಕರೆಯುತ್ತಿದ್ದರು. ಅವರು ಶೀಲಾಂತಿಪಿಳ್ಳೆ ನಾಯರ್ ಜಾತಿಗೆ ಸೇರಿದ್ದು, ಅವರು ಮುಟ್ಟಿದ ನೀರನ್ನು ಸಹ ಮೇಲ್ವರ್ಗದವರು ಕುಡಿಯುತ್ತಿರಲಿಲ್ಲ. ಹಾಗೂ ಅವರ ಜಾತಿಯಲ್ಲಿ ಮದುವೆಯಾದರೆ ಮಣ್ಣಿನ ಮನೆಯಲ್ಲಿ ಮಲಗಬೇಕೆಂಬ ಸಂಪ್ರದಾಯವಿತ್ತು. ಆದ್ದರಿಂದ ಈಚರಪಿಳ್ಳೆಯು ಹೆಂಡತಿಯ ಮಣ್ಣಿನ ಮನೆಯಲ್ಲಿಯೇ ಮಲಗುತ್ತಿದ್ದು ಅಲ್ಲಿಯೇ ಜೀವನ ಮಾಡುತ್ತಾನೆ. ಆದ್ದರಿಂದ ಈಚರಪಿಳ್ಳೆಯ ತರವಾಡಿನವರು ಅವನನ್ನು ಜಾತಿಭ್ರಷ್ಟನನ್ನಾಗಿ ಮಾಡಿ ಅವರ ಮನೆಯಿಂದ ಹೊರಗೆ ಹಾಕಿದ್ದರು. ಆದರೆ ಉಣ್ಣಾಚಿಯು ಒಂದು ದಿನ ಗಂಡನ ಮನೆಗೆ ಅವರ ಕಟ್ಟು–ಕಟ್ಟಳೆಯನ್ನು ಮೀರಿ ಹೋಗಿದ್ದಾಗ ಅವಳನ್ನು ಅಡುಗೆ ಕೋಣೆಯ ಬಾಗಿಲಿನ ಹತ್ತಿರಕ್ಕೂ ಬಿಡಿಸಿಕೊಂಡಿರಲಿಲ್ಲ ಹಾಗೂ ಈಚರ ಪಿಳ್ಳೆ ಮತ್ತು ಉಣ್ಣಾಚಿ ಇವರಿಬ್ಬರಿಗೂ ಮನೆಯ ಹೊರಸಾಲೆಯಲ್ಲಿ ಊಟವನ್ನು ಬಡಿಸಿದ್ದರು. ಉಣ್ಣಾಚಿಯು ಹೆಣ್ಣುಮಗುವಿಗೆ ಜನ್ಮ ನೀಡಿದ್ದು ಮಗುವಿಗೆ ಕುಂಜಮಾಳು ಎಂದು ಹೆಸರಿಟ್ಟಿದ್ದರು. ಆ ಮಗು ಅತ್ತಿಪ್ರ ತರವಾಡಿನ ವಂಶವನ್ನು ಮುಂದುವರಿಸಿದ್ದಳು. ಕುಂಜುಮಾಳುವನ್ನು ಚೇನ್ನಾಡು ತರವಾಡಿನ ಕುಂಜುನಾಯರ್ ಮದುವೆ ಮಾಡಿಕೊಂಡಿದ್ದು, ಅವಳಿಗೆ ಗೌರಿ ಎಂಬ ಹೆಣ್ಣುಮಗು ಹುಟ್ಟಿತು. ಕುಂಜುನಾಯರ್ ತನ್ನ ಮನೆಗೆ ಮಗಳು ಗೌರಿಯನ್ನು ಕರೆದುಕೊಂಡು ಹೋಗಿದ್ದಾಗ ಅವಳಿಗೆ ದೂರದಲ್ಲಿ ನಿಲ್ಲಿಸಿ ಬೇರೆ ಬಟ್ಟಲಿನಲ್ಲಿ ಗಂಜಿ ಮತ್ತು ಚಟ್ನಿಯನ್ನು ಮಾತ್ರ ಕೊಡುತ್ತಾರೆ. ಏಕೆಂದರೆ ಕೆಳಜಾತಿಯವಳಾಗಿದ್ದರಿಂದ ಅವರು ಮುಟ್ಟಿದ್ದನ್ನು ಆ ಮನೆಯ ಮಕ್ಕಳು ಊಟ ಮಾಡುವಂತಿರಲಿಲ್ಲ ಹಾಗೂ ಕುಂಜುನಾಯರ್‌ಗೆ ಗಂಜಿ ಮತ್ತು ಚಟ್ನಿ, ಬಾಳೆಕಾಯಿ ಪಲ್ಯ, ಹಪ್ಪಳ, ಬಾಳೆಮೊಗ್ಗೆಯ ಪಲ್ಯ, ಕೆಸುವಿನ ಗೆಡ್ಡೆಯ ಕೂಟು, ಬಾಳೆಕಾಯಿ ಮೇಲೋಗರ, ಉಪ್ಪಿನಕಾಯಿ ಹೀಗೆ ಹಲವಾರು ರೀತಿಯ ತಿನಿಸುಗಳನ್ನು ಇಟ್ಟಿದ್ದರು. ಹೀಗೆ ಊಟದಲ್ಲಿಯೂ ಭೇದಭಾವವನ್ನು ಮಾಡುತ್ತಿದ್ದರು.

ಚುನಕ್ಕುಳ ಪಿಳ್ಳೆ ಅವರು ನಾಯರ್ ಜಾತಿಗೆ ಸೇರಿದ್ದು ಅವನ ಅಳಿಯ ಆಂಡಿಯು ಕೈತಶೇರಿ ತರವಾಡಿನ ಗಾಣಿಗ ಜಾತಿಯ ಹುಡುಗಿಯನ್ನು ಪ್ರೀತಿಸಿ ಅವಳಿಗೆ ವಸ್ತ್ರವನ್ನು ಕೊಟ್ಟು ಮದುವೆ ಮಾಡಿಕೊಂಡಿದ್ದನು. ಆದರೆ ನಾಯರ್ ಹುಡುಗರು ಗಾಣಿಗ ಜಾತಿಯ ಹುಡುಗಿಯನ್ನು ಹಿಂದಿನ ಕಾಲದಿಂದದಲೂ ಮದುವೆ ಮಾಡಿಕೊಳ್ಳುವ ಸಂಪ್ರದಾಯವಿಲ್ಲ ಹಾಗೂ ಬೇರೆ ಯಾವುದೇ ಜಾತಿಯ ಹೆಣ್ಣನ್ನು ಮದುವೆ ಮಾಡಿಕೊಳ್ಳಬಹುದು. ಆದರೆ ಆಂಡಿಯು ತಮ್ಮ ಜಾತಿಯ ಸಂಪ್ರದಾಯವನ್ನು ಮೀರಿ ಮದುವೆ ಮಾಡಿಕೊಂಡಿದ್ದನು.

ಕೋನ್ನೋತ್ತು ತರವಾಡಿನ ಕಾಳಿ ಕುಂಜಮ್ಮನ ಜೊತೆ ಮುಕ್ಕೋಲಿಲ್ ತರವಾಡಿನ ಪರಮನ್ ಸಂಬಂಧ ಇಟ್ಟುಕೊಂಡು ಅವಳಿಗೆ ಮಗು ಜನಿಸುತ್ತದೆ. ಆದ್ದರಿಂದ ಅವಳಿಗೆ ಆಸ್ತಿಯನ್ನು ಕೊಡದೆ ತರವಾಡಿನಿಂದ ಜಾತಿಭ್ರಷ್ಟಳನ್ನಾಗಿ ಮಾಡಿ ಹೊರಗೆ ಹಾಕುತ್ತಾರೆ. ಪರಮನ್ ಕೆಳಜಾತಿಯವನಾಗಿದ್ದರಿಂದ **'ಅಪ್ಪಾ'** ಎಂದು ಕರೆಯುವಂತಿರಲಿಲ್ಲ.

ಹೊಲೆಯ ಶೀತಂಗನ್ ಪಪ್ಪುಪಿಳ್ಳೆ ಒಡೆಯರ ಹತ್ತಿರ ಕೆಲಸ ಮಾಡುತ್ತಿದ್ದು, ಅವರಿಗೆ ಮೈಲಿಗೆ ಮಾಡಬಾರದೆಂದು ದೂರದಿಂದ ಹೋಗುತ್ತಿದ್ದನು. ಹಾಗೂ ಇವನು ಮೇಲ್ವರ್ಗದವರು ಓಡಾಡುವ ದಾರಿಯಲ್ಲಿ ಹೋಗುವಾಗ ಕಂಕುಳಲ್ಲಿ ಗೊರುಬನ್ನಿಟ್ಟುಕೊಂಡು ನಾನು ಬರುತ್ತಿದ್ದೇನೆಂದು ಮೈಲಿಗೆ ಕೂಗನ್ನು ಹಾಕುತ್ತ ನಡೆದುಕೊಂಡು ಹೋಗುತ್ತಿದ್ದನು. ಹಿಂದಿನ ಕಾಲದಲ್ಲಿ ಕೆಳಜಾತಿಯವರು ಮೇಲ್ವರ್ಗದವರು ನಡೆದಾಡುವ ಸಾರ್ವಜನಿಕ ದಾರಿಗಳಲ್ಲಿ ಓಡಾಡುವ ಹಕ್ಕು ಇರಲಿಲ್ಲ. ಬದಲಾಗಿ ಬೇರೆ ದಾರಿಗಳಲ್ಲಿ ನಡೆದಾಡಬೇಕಿತ್ತು. ಆ ಕೆಳವರ್ಗದ ಜಾತಿಯವರಿಗೆ ಆ ದಾರಿಗಳಲ್ಲಿ ನಡೆದಾಡುವ ಅನುಮತಿಯನ್ನು ಕೊಟ್ಟಾಗ ಇಟ್ಟೇಪನು ಮೊದಲು ನಡೆದುಕೊಂಡು ಹೋಗುತ್ತಾನೆ. ಇವನು ಕೋರಂತ್ರ ಪರೆಯ ಜಾತಿಯವನಾದ ತಿರುವಂಚನ ವಂಶಕ್ಕೆ ಸೇರಿದ್ದ ತಿರುವನ ಮಗನಾಗಿದ್ದನು. ದೇವಾಲಯದ ಎದುರಿನಿಂದ ಪಶ್ಚಿಮ ದಿಕ್ಕಿನಲ್ಲಿರುವ ಅಂಬಲಪುಳದ ಕಡೆಗೆ ಹೋಗುವ ದಾರಿಯ ಎರಡು ಬದಿಗಳಲ್ಲಿ ಊರಿನ ಪ್ರಮುಖರಾದ ಬ್ರಾಹ್ಮಣರ ಮನೆಗಳಿವೆ. ಆ ದಾರಿಯಲ್ಲಿ ಗೊರುಬನ್ನು ಕಂಕುಳಲ್ಲಿ ಇಟ್ಟುಕೊಂಡು ಇಟ್ಟೇಪನು ನಡೆದುಕೊಂಡು ಹೋಗುತ್ತಿದ್ದನು. ಅವನು ಮೇಲ್ಜಾತಿಯ ತಂಬುರಾನ್‌ಗಳು ಯಾರಾದರೂ ಎದುರಿನಿಂದ ಬರುತ್ತಿದ್ದರೆ ಅವರಿಗೆ ಇವನು ಹೋಗುತ್ತಿರುವುದು ಗೊತ್ತಾಗಬೇಕೆಂದು ಹಾಗೂ ಅವರಿಗೆ ಅಶುದ್ಧಿ ಮಾಡಬಾರದೆಂದು ಮೈಲಿಗೆ ಕೂಗನ್ನು ಹಾಕುತ್ತಿದ್ದನು. ಅವನು ನಡೆದಾಡುವ ದಾರಿಯ ಅಗಲ ಹತ್ತು ಅಡಿಗಳು ಮಾತ್ರ ಇತ್ತು. ಆದ್ದರಿಂದ ಇಟ್ಟೇಪನು ದೂರ ಸರಿಯಬೇಕಾದರೆ ದಾರಿಯಲ್ಲಿರುವ ಬ್ರಾಹ್ಮಣರ ಮನೆಗೆ ಹೋದರೆ ಅವರು ಇವನಿಂದ ಅಶುದ್ಧರಾಗುತ್ತಾರೆ. ಹಾಗಾಗಿ ಮೈಲಿಗೆಯನ್ನು ಮಾಡಬಾರದೆಂದು ಎದುರಿಗೆ ಬರುತ್ತಿರುವ ತಂಬುರಾನ್‌ಗಳು ದೂರ ಸರಿದು ನಿಲ್ಲಬೇಕೆಂದು ಇಟ್ಟೇಪನು ನಾನು ಬರುತ್ತಿರುವೆನೆಂದು ಮೈಲಿಗೆ ಕೂಗನ್ನು ಹಾಕುತ್ತ ಹೋಗಬೇಕಾಗಿತ್ತು. ಹೀಗೆ ಇವನ ಮೈಲಿಗೆ ಕೂಗು ಒಂದು ಘೋಷಣೆಯ ವಾಕ್ಯವಾಗಿತ್ತು. ಅವನು ನಾನು ಈ ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದೇನೆ ಎಂದು **'ಎವ್‌ವಾ'** ಎಂದು ಕೂಗನ್ನು ಹಾಕಿ ಮುಂದಕ್ಕೆ ಸಾಗುತ್ತಿದ್ದನು.

ಪರೆಯ ಹೊಲೆಯ ಮತ್ತು ಈಳವ ಜಾತಿಯವರ ಮಕ್ಕಳಿಗೆ ವಿದ್ಯೆ ಕಲಿಸಲು ಸರ್ಕಾರದಿಂದ ಆದೇಶ ಬಂದಿದ್ದು ಶಾಲೆಯನ್ನು ಪ್ರಾರಂಭ ಮಾಡುತ್ತಾರೆ. ಅಂದರೆ ಊರಿನ ಮಾಣಿಕ್ಯ ಕರೆಯ ಒಡಗಣ ದಿಕ್ಕಿನ ಒತ್ತುವರಿ ಜಮೀನಿನಲ್ಲಿ ಸಾಗುವಾನಿ ಕಂಬ ಮತ್ತು ಬಿದಿರುಗಳನ್ನು ಉಪಯೋಗಿಸಿಕೊಂಡು ಶಾಲೆಯನ್ನು ಕಟ್ಟುತ್ತಾರೆ. ಆದರೆ ಊರಿನ ಮುಖ್ಯಸ್ಥರಾದ ಕುಂಜನ್‌ಪಿಳ್ಳೆ, ಪರಮನ್, ಇಟ್ಟುಣ್ಣಾನ್ ಅವರು ಪ್ರತಿಯೊಂದು ಕುಟುಂಬದ ಹೊಲೆಯ, ಪರೆಯ ಮತ್ತು ಈಳವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬಾರದೆಂದು ನಿರ್ಬಂಧವನ್ನು ಹಾಕುತ್ತಾರೆ. ಆದರೆ ಒಂದು ವೇಳೆ ಅವರ ಆಜ್ಞೆಯನ್ನು ಮೀರಿ ಶಾಲೆಗೆ ಕಳುಹಿಸಿದರೆ ಅವರ ಕುಟುಂಬದಲ್ಲಿ ನಡೆಯುವ ಹುಟ್ಟು–ಸಾವು ಯಾವುದೇ ಸಮಾರಂಭಗಳಿಗೆ ಹೋಗಬಾರದೆಂಬ ನಿಷೇಧವನ್ನು ಮಾಡಿದ್ದರು. ಹೀಗೆ ಕೆಳವರ್ಗದ ಜಾತಿಯವರು ಮೇಲ್ವರ್ಗದವರಿಗೆ ಅವರು ಹೇಳಿದಂತೆ ಕೇಳಿಕೊಂಡು ವಿಧೇಯವಾಗಿ ನಡೆದುಕೊಳ್ಳಬೇಕಿತ್ತು. ಈ ಕೆಳವರ್ಗದವರು ಓದು–ಬರಹವನ್ನು ಕಲಿತು ಸಮಾಜದಲ್ಲಿ ಎಲ್ಲಾ ರೀತಿಯ ಪ್ರಗತಿಯನ್ನು ಸಾಧಿಸಿ ಮೇಲೆ ಬರುತ್ತಾರೆ ಎನ್ನುವ ಕಾರಣದಿಂದ ಹಾಗೂ ಅವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವುದು ಮೇಲ್ವರ್ಗದವರ ಪ್ರಮುಖ ಉದ್ದೇಶವಾಗಿತ್ತು. ಅವರ ಮಕ್ಕಳು ಶಾಲೆಗೆ ಹೋದರೆ ಮುಂದೆ ಗದ್ದೆ ಕೆಲಸ ಮಾಡುವವರು ಯಾರು ಸಿಗುವುದಿಲ್ಲ ಎಂಬ ಕಾರಣದಿಂದ ಶೀಲಾಂತಿಪಿಳ್ಳೆ ಕಲ್ಯಾಣಿಯಮ್ಮನ ಮಗ ಕೇಶವನ್ ಶಾಲೆಯ ಮೇಷ್ಟ್ರಾಗಿದ್ದು ಅವನು ಹೊಲೆಯ, ಪರೆಯ ಮತ್ತು ಈಳವರ ಹಟ್ಟಿಗೆ ಹೋಗಿ ವಿದ್ಯೆಯನ್ನು ಕಲಿಯುವುದರಿಂದ ಆಗುವಂತಹ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಅವರಿಗೆ ತಿಳಿಸಿ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬಂದು ಓದು–ಬರಹವನ್ನು ಕಲಿಸುತ್ತಿದ್ದನು. ಆದರೆ ಮೇಲ್ವರ್ಗದ ಮುಖ್ಯಸ್ಥರು ಕೇಶವನ್‌ಗೆ ಬೆದರಿಕೆ ಹಾಕಿ ಕೆಲಸವನ್ನು ಬಿಡಿಸುತ್ತಾರೆ. ಕೊನೆಗೆ ಅವನು ಅವರನ್ನು ಎದುರು ಹಾಕಿಕೊಳ್ಳದೆ ಅಸಹಾಯಕನಾಗಿಬಿಟ್ಟನು. ಹೀಗೆ ಈ ಎಲ್ಲಾ ಕಾರಣಗಳಿಂದ ಕೆಳವರ್ಗದ ಹೊಲೆಯ, ಪರೆಯ ಮತ್ತು ಈಳವರು ಅಸಹಾಯಕರಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ.

ಈಳವ ಸಮುದಾಯದ ಮುಖ್ಯ ವ್ಯಕ್ತಿಗಳಾದ ಅಂಬಕಾಡನ್ ಮತ್ತು ಕಲ್ಲಿಶೇರಿ ಅವರು ಹೊಲೆಯ ಮತ್ತು ಪರೆಯ ಮಕ್ಕಳ ಜೊತೆಯಲ್ಲಿ ಈಳವರ ಮಕ್ಕಳನ್ನು ಶಾಲೆಗೆ ಕಳುಹಿಸಬಾರದೆಂಬ ನಿರ್ಬಂಧವನ್ನು ಹಾಕುತ್ತಾರೆ. ಏಕೆಂದರೆ ಈಳವರು ಹೊಲೆಯ ಮತ್ತು ಪರೆಯರಿಗಿಂತ ಸ್ವಲ್ಪ ಮೇಲ್ಪಟ್ಟವರಾಗಿದ್ದು, ಅವರ ಜೊತೆ ಓದು–ಬರಹ ಕಲಿಯಲು ಹೋಗಿ ಮುಟ್ಟಿಸಿಕೊಂಡು ಮಡಿ ಮೈಲಿಗೆ ಆಗುತ್ತದೆ ಎನ್ನುವ ಕಾರಣದಿಂದ ಹಾಗೂ ಈಳವ ಜಾತಿಯವರಾದ ಕುಮರು, ವೇಲು, ಇಟ್ಟಿರ ಈ ಮೂವರು ಶಾಲೆಯ ಜಗುಲಿಕಟ್ಟೆಯಲ್ಲಿ ಕುಳಿತಿದ್ದಾಗ ಚೇನ್ನಾಡು ತರವಾಡಿನ ಕುಂಜುನಾಯರ್ ಮಗ ಮಣಿಕಂಠನನ್ನು ಶಾಲೆಗೆ ಸೇರಿಸಲು ಬಂದಿದ್ದನ್ನು ನೋಡಿ ಇವರಿಗೆ ಮೈಲಿಗೆ ಮಾಡಬಾರದೆಂದು ಸ್ವಲ್ಪ ದೂರ ಸರಿದು ನಿಂತುಕೊಳ್ಳುತ್ತಾರೆ. ಕುಂಜುನಾಯರ್ ಮಗನಾದ ಮಣಿಕಂಠನನ್ನು ಶಾಲೆಗೆ ಸೇರಿಸುತ್ತಾನೆ ಹಾಗೂ ಶಾಲೆಯಲ್ಲಿ ಉಣ್ಣಿ ನಂಬೂದಿರಿ ಮುಖ್ಯೋಪಾಧ್ಯಾಯರು ಹೊಲೆಯ, ಪರೆಯ ಮತ್ತು ಈಳವ ಜಾತಿಯವರ ಮಕ್ಕಳ ಜೊತೆ ನಾಯರ್ ಹುಡುಗರನ್ನು ಆಟವಾಡುವುದಕ್ಕೂ ಸಹ ಬಿಡುತ್ತಿರಲಿಲ್ಲ. ಶಾಲೆಯಲ್ಲಿ ಮಣಿಕಂಠನು ಮೇಲ್ವರ್ಗದವರ ಮಕ್ಕಳಾದ ಪುನ್ನೇಲ್‌ಕುಟ್ಟ ಮತ್ತು ವರ್ಕತ್ತು ಅವರ ಜೊತೆ ಮಾತ್ರ ಗೆಳೆತನ ಮಾಡುತ್ತಿದ್ದನು. ಹೀಗೆ ಮಣಿಕಂಠನು ಪ್ರತಿದಿನವೂ ಮಧ್ಯಾಹ್ನ ಊಟ ಮಾಡಲು ಮನೆಗೆ ಬರುವಾಗ ಮತ್ತು

ಸಂಜೆ ಶಾಲೆ ಮುಗಿದ ಮೇಲೆ ಸ್ನಾನ ಮಾಡಿಕೊಂಡೆ ಮನೆಯೊಳಗೆ ಹೋಗಬೇಕಿತ್ತು. ಈ ರೀತಿಯಾಗಿ ಊರಿನ ಪ್ರತಿಯೊಂದು ಮೇಲ್ಜಾತಿ ಮನೆಗಳಲ್ಲಿ ಮಕ್ಕಳನ್ನು ಮಧ್ಯಾಹ್ನ ಮತ್ತು ಸಂಜೆ ಸ್ನಾನ ಮಾಡಿಸಿ ಮನೆಯೊಳಗೆ ಬಿಡಿಸಿಕೊಳ್ಳುವ ಸಂಪ್ರದಾಯವಿತ್ತು. ಮಂಗಲಶೇರಿಯ ಕಾರಣವರ್‌ನಾದ ಇರವಿಪಿಳ್ಳೆಯು ತರವಾಡಿನಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದ ಈಳವ ಜಾತಿಯವನಾದ ಕರುಂಬನ ಮಗ ಚೆನ್ನನನ್ನು ಶಾಲೆಗೆ ಸೇರಿಸಲು ಅರ್ಜಿಯನ್ನು ಭರ್ತಿ ಮಾಡಿಕೊಂಡು ಕೊಡಲು ಹೋದಾಗ ಚೇನ್ನಾಡು ನುಂಜುನಾಯರ್ ಮತ್ತು ಮುಖ್ಯೋಪಾಧ್ಯಾಯರಿಗೆ ಅಶುದ್ಧಿ ಮಾಡಬಾರದೆಂದು ದೂರ ಸರಿದು ನಿಲ್ಲುತ್ತಾನೆ. ಕೋರಂತ್ರ ಪರೆಯನಾದ ತಿರುವಂಚನ ವಂಶಕ್ಕೆ ಸೇರಿದ್ದ ಇಟ್ಟೇಪನು ಮೇಲ್ವರ್ಗದವರ ಆಜ್ಞೆ ಮತ್ತು ನಿಷೇಧವನ್ನು ಮೀರಿ ಮಗ ತಿರುವನನ್ನು ಶಾಲೆಗೆ ಕಳುಹಿಸುತ್ತಾನೆ. ಅವನು ಶಾಲೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ದೇವಾಲಯದ ಹೊರಗೆ ಕೆಲಸ ಮಾಡುವವರು ಅವನನ್ನು ಹೊಡೆದು ಹೆದರಿಸಿ ಪುನಃ ಮರಳಿ ಮನೆಗೆ ಕಳುಹಿಸುತ್ತಿದ್ದರು. ಆದ್ದರಿಂದ ಇಟ್ಟೇಪನು ಪ್ರತಿದಿನವೂ ಮಗನನ್ನು ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬರುತ್ತಿದ್ದನು. ಊರಿನ ಮುಖಂಡರಾದ ಕುಂಜನ್‌ಪಿಳ್ಳೆ ಮತ್ತು ಪರಮನ್‌ಕರ್ತಾವು ಇಬ್ಬರು ಸೇರಿಕೊಂಡು ಇಟ್ಟೇಪನನ್ನು ಕೊಂದು ಊರಿನ ಕಾಲುವೆಗೆ ಅವನ ಶವಕ್ಕೆ ಕಲ್ಲು ಕಟ್ಟಿ ಹಾಕಿ ಬಂದಿದ್ದರು. ಕೊನೆಗೆ ಒಂದು ದಿನ ರಾತ್ರಿ ಮೇಲ್ವರ್ಗದ ಮುಖಂಡರೆಲ್ಲರೂ ಸೇರಿಕೊಂಡು ಕೆಳವರ್ಗದವರ ಶಾಲೆಗೆ ಬೆಂಕಿ ಹಚ್ಚಿ ಸುಟ್ಟು ಹಾಕುವ ಮೂಲಕ ಅವರಿಗೆ ಶಿಕ್ಷಣ ಪಡೆಯುವ ಅವಕಾಶವನ್ನು ವಿರೋಧಿಸಿ ನಿಷೇಧ ಮಾಡುತ್ತಾರೆ. ಆದ್ದರಿಂದ ಕೊನೆಗೆ ಸರ್ಕಾರವು ಶಾಲೆಯನ್ನು ರದ್ದು ಮಾಡಿ ತೆಗೆದು ಹಾಕುತ್ತದೆ.

ಪದ್ಮನಾಭ ದೇವರ ಉತ್ಸವದ ದಿನ ಇಡಿ ಊರಿಗೆ ಅನ್ನಸಂತರ್ಪಣೆ ಮಾಡಲು ಅನ್ನದ ರಾಶಿಯನ್ನು ಹಾಕಿದ್ದರು. ಕೆಳವರ್ಗದ ಪಳ್ಳಿಚ್ಚಾನ್ ಜಾತಿಯವನಾದ ವೇಳಪ್ರ ಕಾರಣವರ್‌ನು ಅನ್ನದ ರಾಶಿಗೆ ಉದ್ದೇಶಪೂರ್ವಕವಾಗಿ ಕೈಹಾಕಿ ಅದನು ಬಾಚಿಕೊಂಡು ಸುತ್ತಲು ಎಸೆದು ಅಶುದ್ಧ ಮಾಡುತ್ತಾನೆ. ಕರೆಗಳ (ಊರು) ನಾಯಕರುಗಳಾದ ಕೋನ್ನೊತ್ತು ಪಿಳ್ಳೆ, ಕೋಡಾಂತ್ರ ಆಶಾನ್, ಚೀರಟ್ಟ ಕೈಮಳ್‌ರನ್ನು ಅಸಭ್ಯವಾಗಿ ನಿಂದಿಸುತ್ತಾನೆ. ಈ ವೇಳಪ್ರ ಕುಟುಂಬದವರು ಪಳ್ಳಿಚ್ಚಾನ್ ಎಂಬ ಕೆಳಜಾತಿಯವರಾಗಿದ್ದು ಇವರು ಮುಟ್ಟಿದ ಅನ್ನವನ್ನು ಊರಿನ ಮೇಲುವರ್ಗದವರು ಊಟ ಮಾಡುವಂತಿರಲಿಲ್ಲ. ಆದ್ದರಿಂದ ಆ ದಿನ ಊರಿನ ಜನರು ಸಮಾರಾಧನೆಯ ಊಟವನ್ನು ಮಾಡುವುದಿಲ್ಲ. ಅಂದರೆ ದೇವರ ನೈವೇದ್ಯ ಅವರಿಗೆ ಸಿಗುವುದಿಲ್ಲ. ಆದ್ದರಿಂದ ಊರಿನ ಜನರು ಸಭೆಯನ್ನು ಮಾಡಿ ವೇಳಪ್ರ ಕುಟುಂಬದವರ ಮೇಲೆ ನಿಷೇಧ ಹಾಕುತ್ತಾರೆ. ಅಂದರೆ ಅವರ ಮನೆಯಲ್ಲಿ ಹುಟ್ಟು–ಸಾವು ಏನೇ ಆದರೂ ಅವರಿಗೆ ಸಹಾಯ ಮಾಡಬಾರದು ಹಾಗೂ ಮಾತನಾಡಿಸಬಾರದೆಂದು ಹೇಳಿ ಅವರನ್ನು ಸಮಾಜದಿಂದ ಬಹಿಷ್ಕಾರ ಹಾಕಿ ಹೊರಗೆ ಹಾಕುತ್ತಾರೆ. ವೇಳಪ್ರ ಕಾರಣವರು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಲು ಒಪ್ಪಿಕೊಂಡಾಗ ಊರಿನ ವಿದ್ಯಾಕೇಂದ್ರದ ಪರಮ ಗುರುಗಳಾದ ಪರಮು ಆಶಾನ್‌ರು ಆ ಪ್ರಾಯಶ್ಚಿತ್ತವಾಗಿ ಏನನ್ನು ಕೊಡಬೇಕೆಂದು ನಿರ್ಧರಿಸುತ್ತಾರೆ. ಅಂದರೆ ಮುಂದೆ ಎಲ್ಲಾ ಕಾಲಕ್ಕೂ ಪ್ರತಿದಿನ ಬ್ರಾಹ್ಮಣನೊಬ್ಬನಿಗೆ ಮಧ್ಯಾಹ್ನ ನಮಸ್ಕಾರದ ಊಟವಾಗಿ ನೈವೇದ್ಯವನ್ನು ಸಲ್ಲಿಸಬೇಕು. ಆದ್ದರಿಂದ ಅವನಿಗೆ ದಿನವೊಂದಕ್ಕೆ ಬೇಕಾಗುವುದು ಮೂರು ಪಾವು ಅಕ್ಕಿ ಹಾಗೂ ಈ ಲೆಕ್ಕದ ಪ್ರಕಾರ ಐವತ್ತೈದು ಕಳಸಿಗೆ ಭತ್ತಗೇಣಿ ಬರುವಂತಹ ಗದ್ದೆಯನ್ನು ದೇವಸ್ಥಾನಕ್ಕೆ ಒಪ್ಪಿಸಬೇಕೆಂದು ಆಜ್ಞೆ

ಮಾಡುತ್ತಾರೆ. ಆದ್ದರಿಂದ ವೇಳಪ್ರ ಕಾರಣವರ್‌ನು ಇಪ್ಪತ್ತು ಕಳಸಿಗೆ ಬೀಜಬಿತ್ತನೆಯ ಗದ್ದೆಯನ್ನು ದೇವಾಲಯದ ಹೆಸರಿಗೆ ದಾಖಲಾತಿ ಮಾಡಿಸಿಕೊಟ್ಟನು.

ಚೌಕಟ್ಟಿನ ಮನೆ ಕಾದಂಬರಿಯಲ್ಲಿ ನಿರೂಪಿತವಾಗಿರುವಂತೆ ಊರಿನ ನಾಯರ್ ಸಮುದಾಯದವರು ಕೆಳವರ್ಗದ ಜಾತಿಯವರಾದ ಮಾಪಿಳ್ಳೆ ಮುಸಲ್ಮಾನರನ್ನು ಕೀಳಾಗಿ ನಡೆಸಿಕೊಂಡ ರೀತಿಯನ್ನು ನೋಡಬಹುದು. ವಡಕ್ಕೇಪಾಟ್ ತರವಾಡಿನವರು ಊರಿನಲ್ಲಿ ಬೇರೆ ಜಾತಿಯವರ ಮನೆಯಲ್ಲಿ ಊಟ ಮತ್ತು ನೀರು ಸಹ ಕುಡಿಯಬಾರದೆಂಬ ಕಟ್ಟುಕಟ್ಟಳೆಯ ಸಂಪ್ರದಾಯವಿತ್ತು. ಆದರೆ ಆ ಮನೆಯ ಮಗಳಾದ ಪಾರುಕುಟ್ಟೀಯ ಮಗನಾದ ಅಪ್ಪುಣ್ಣಿಯು ಅಂತಹ ನಿಯಮವನ್ನು ಮೀರಿ ಮಾಪಿಳ್ಳೆ ಮುಸ್ಲಿಮರ ಮನೆಯಲ್ಲಿ ಸೈದಾಲಿಕುಟ್ಟಿಯ ತಾಯಿ ಪಾತುಮ್ಮ ಬಡಿಸಿದ ಅನ್ನ ಮತ್ತು ಕೆಂಪು ಬಣ್ಣದಲ್ಲಿರುವ ಸಾಂಬಾರನ್ನು ಊಟ ಮಾಡಿ ಬಂದಿದ್ದನು. ಅಪ್ಪುಣ್ಣಿಯು ಮನೆಯಲ್ಲಿ ಅಡುಗೆ ಮಾಡಲು ಯೂಸೋಫನ ಅಂಗಡಿಗೆ ಎಣ್ಣೆಯನ್ನು ತರಲು ಹೋಗಿದ್ದನು. ಆ ಸಂದರ್ಭದಲ್ಲಿ ಹೊಲತಿಯರು ಕೆಲಸ ಮುಗಿಸಿ ಕೂಲಿಯ ಭತ್ತವನ್ನು ಅಂಗಡಿಗೆ ತಂದು ಮಾರಿ ಸಾಮಾನು ಕೊಂಡುಕೊಳ್ಳುತ್ತಿದ್ದರು. ಅವನು ಹೊಲತಿಯರನ್ನು ತಳ್ಳಿ ಮುಟ್ಟಿಸಿಕೊಂಡು ಅಂಗಡಿಯೊಳಗೆ ಹೋಗಿ ಎಣ್ಣೆಯನ್ನು ತೆಗೆದುಕೊಂಡು ಮನೆಗೆ ಬಂದು ಮೈಲಿಗೆ ಆಗಿರುವುದರಿಂದ ಸ್ನಾನ ಮಾಡಿ ಮಡಿಬಟ್ಟೆ ಹಾಕಿಕೊಂಡು ಮನೆಯೊಳಗಡೆ ಹೋಗುತ್ತಾನೆ. ಅದೇ ಊರಿನ ಕೋಂದುಣ್ಣಿ ನಾಯರ್ ಊರಿನ ಎಲ್ಲಾ ಜಾತಿಯವರೊಡನೆ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿದ್ದನು. ಇವನು ಮಾಪಿಳ್ಳೆ ಮುಸಲ್ಮಾನನಾದ ಸೈದಾಲಿ ಕುಟ್ಟಿಯ ಜೊತೆಯಲ್ಲಿ ಸ್ನೇಹವನ್ನು ಹೊಂದಿದ್ದು ಅವನ ಮನೆಯಲ್ಲಿ ಮುದಿಯಾದ ಆಡಿನ ಮಾಂಸ ಮತ್ತು ಅಕ್ಕಿ ಚಪಾತಿಯನ್ನು ಊಟ ಮಾಡಿ ಚಹಾವನ್ನು ಕುಡಿದು ಬಂದಿದ್ದನು. ಅಂದರೆ ಹಿಂದೂಗಳು ಮಾಪಿಳ್ಳೆ ಮುಸಲ್ಮಾನರ ಮನೆಗಳಲ್ಲಿ ಚಹಾವನ್ನು ಸಹ ಕುಡಿಯಬಾರದು ಎಂಬ ನಿರ್ಬಂಧವನ್ನು ಅಂದಿನ ಸಮಾಜ ಹಾಕಿತ್ತು. ಆದರೆ ಅಂತಹ ನಿರ್ಬಂಧವನ್ನು ಮೀರಿ ಹೋಗಿದ್ದನು. ಊರಿನಲ್ಲಿ ಮುತ್ತಳಿ ಗುಡ್ಡದಿಂದ ಶಿವರಾತ್ರಿಯ ಸಮಯದಲ್ಲಿ ದುರ್ಗಮ್ಮದೇವಿಯ ಮೆರವಣಿಗೆಯನ್ನು ಮುಸಲ್ಮಾನರ ಮಸೀದಿಯ ಮುಂಭಾಗದ ರೋಡಿನಲ್ಲಿ ವಾದ್ಯಗಳ ಸಮೇತ ನಡೆಸಿಕೊಂಡು ಬರುತ್ತಿದ್ದಾಗ ಮಾಪಿಳ್ಳೆ ಮುಸಲ್ಮಾನರು ಬಂದು ಗಲಭೆ ಎಬ್ಬಿಸಿ ಹೊಡೆದು ಅನೇಕ ಜನರಿಗೆ ನೋವನ್ನು ಮಾಡಿದ್ದರು. ಹೀಗೆ ಹಿಂದೂ ಮತ್ತು ಮುಸ್ಲಿಂ ಎರಡು ಧರ್ಮದವರ ನಡುವೆ ವೈರತ್ವವಿತ್ತು.

ಹೀಗೆ ಎರಡು ಕಾದಂಬರಿಗಳಲ್ಲಿಯೂ ಮೇಲ್ವರ್ಗದ ಜಾತಿಯವರು ಕೆಳಜಾತಿಯವರಾದ ಪಳ್ಳಿಚ್ಚಾನ್, ಗಾಣಿಗ, ಮಾಪಿಳ್ಳೆ ಮುಸಲ್ಮಾನ, ಹೊಲೆಯ, ಪರೆಯ, ಈಳವ, ಆಟಿತರ, ಶೀಲಾಂತಿಪಿಳ್ಳೆ ಇವರನ್ನು ತುಂಬಾ ಕೀಳಾಗಿ ನಡೆಸಿಕೊಂಡಿರುವುದು ಕಂಡುಬರುತ್ತದೆ. ಅಂದರೆ ಮೇಲ್ವರ್ಗದವರು ಮತ್ತು ಜಮೀನ್ದಾರ ಒಡೆಯರು ಕೆಳವರ್ಗದವರಿಗೆ ಹಲವಾರು ರೀತಿಯ ಕಟ್ಟು–ಕಟ್ಟಳೆ, ನೀತಿ–ನಿಯಮ, ನಿರ್ಬಂಧ ನಿಷೇಧಗಳನ್ನು ಹಾಕುವ ಮೂಲಕ ಅವರ ಅಂತಸ್ತನ್ನು ಕೆಳಮಟ್ಟದಲ್ಲಿ ಗುರುತಿಸಿ ಇವರು ಹೇಳಿದಂತೆ ಕೇಳುತ್ತ ಅಡಿಯಾಳಾಗಿ ಬದುಕಬೇಕಿತ್ತು. ಇಂತಹ ಕೆಟ್ಟ ಜಾತಿ ಸಂಪ್ರದಾಯವು ಕೇರಳದಲ್ಲಿ ಹಲವು ತಲೆಮಾರುಗಳಿಂದಲೂ ವಿವಿಧ ಸಮುದಾಯಗಳಲ್ಲಿ ಸಂಪ್ರದಾಯಬದ್ಧವಾಗಿ ಕಟ್ಟು–ನಿಟ್ಟಿನ ಆಚರಣೆಗಳ ಮೂಲಕ ನಡೆದುಕೊಂಡು ಬಂದಿದೆ.

**ಪರಾಮರ್ಶನ ಗ್ರಂಥಗಳು**


- ವಾಸುದೇವನ್ ನಾಯರ್ ಎಂ.ಟಿ. (1972). *ಚೌಕಟ್ಟಿನ ಮನೆ.* (ಅನು, ತಿಮ್ಮಪ್ಪ ಬಿ.ಕೆ.). ನ್ಯಾಷನಲ್ ಬುಕ್ ಟ್ರಸ್ಟ್.
- ತಕಳಿ ಶಿವಶಂಕರ ಪಿಳ್ಳೆ. (2007). *ಹಗ್ಗ–ಭಾಗ–1, 2, 3.* (ಅನು, ನಾಯರ್ ಕೆ.ಕೆ. ಮತ್ತು ಅಶೋಕ್ ಕುಮಾರ್). ಸಾಹಿತ್ಯ ಅಕಾಡೆಮಿ.
- ಮೋಹನ ಕುಂಟಾರ್, ಎ. (2018). *ಮಲಯಾಳ ಸಮಾಜ ಮತ್ತು ಸಂಸ್ಕೃತಿ.* ಯಾಜಿ ಪ್ರಕಾಶನ.
- ಮೋಹನ ಕುಂಟಾರ್, ಎ. (2006). *ಕೇರಳ ಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮೋಹನ ಕುಂಟಾರ್, ಎ. (2004). *ಕೈರಳಿ.* ಸಿ.ವಿ.ಜಿ. ಪಬ್ಲಿಕೇಷನ್ಸ್.